ಎಸ್.ಸಿ. ಸಂಃ10042/21

ಪಿಡಬ್ಲೂ 1

ಪ್ರಮಾಣ ವಚನ ಭೋದಿಸಿದ ದಿನಾಂಕಃ **23.11.2023**

ಪಾಟೀ ಸವಾಲುಃ ಆರೋಪಿತನ ಪರ ವಕೀಲರಿಂದಃ

ನಾನು ವ್ಯವಸಾಯ ಮಾಡುತ್ತೇನೆ ಎಂದರೆ ಹೌದು. ಆರೋಪಿ ವ್ಯವಸಾಯ ಮಾಡುತ್ತಾನೆ ಎಂದರೆ ಹೌದು. ಆರೋಪಿ ಮತ್ತು ನಾನು ಒಂದೇ ಊರಿನವರಿದ್ದು ಒಂದು ಫರ್ಲಾಂಗು ದೂರದಲ್ಲಿ ಅವರ ಮನೆ ಇರುತ್ತದೆ. ಆರೋಪಿಯ ಜಮೀನು ನಮ್ಮ ಜಮೀನಿನಿಂದ ಒಂದು ನಂಬರ್ ಬಿಟ್ಟು ಇರುತ್ತದೆ. ಆರೋಪಿ ಮತ್ತು ನಾವು ಸಂಬಂಧಿಕರು ಎಂದರೆ ಸರಿಯಲ್ಲ. ನನ್ನ ಹಿರಿಯ ಮಗನ ಹೆಂಡತಿ ಆರೋಪಿಯ ಮನೆಯಲ್ಲಿ ಜನಿಸಿದ್ದಳು ಎಂದರೆ ಸರಿಯಲ್ಲ. ಆರೋಪಿ ಚಿಕ್ಕವನಿದ್ದಾಗಿನಿಂದ ನಮ್ಮ ಮನೆಯಲ್ಲಿ ಕೆಲಸ ಮಾಡುತ್ತಿದ್ದ ಎಂದರೆ ಹೌದು. ಆರೋಪಿ ನಮ್ಮ ಮನೆಯಲ್ಲಿ ಕೂಲಿ ಕೆಲಸಕ್ಕೆ ಬರುವುದು ಬಿಟ್ಟು 3 ರಿಂದ 4 ವರ್ಷ ಆಗಿದೆ ಎಂದರೆ ಹೌದು. ಆರೋಪಿ ಕೂಲಿ ಕೆಲಸಕ್ಕೆ ಬಂದಾಗ ಆತನಿಗೆ ದಿನದ ಸಂಬಳ ಕೊಡುತ್ತಿದ್ದೆ. ನಮ್ಮ ಊರಿನಲ್ಲಿ ಜಮೀನು ಕೆಲಸಕ್ಕೆ ಬಂದರೆ ವಾರಕ್ಕೆ ಒಂದು ಸಾರಿ ಪೇಮೆಂಟ್ ಮಾಡುತ್ತೇವೆ ಎಂದರೆ ಸರಿಯಲ್ಲ, ದಿನಗೂಲಿ ಎಂದು ನುಡಿಯುತ್ತಾರೆ. ಆರೋಪಿ ಮೊದಲಿಂದಲೂ ನಮ್ಮ ಮನೆಗೆ ಕೆಲಸಕ್ಕೆ ಬರುತ್ತಿರಲಿಲ್ಲ. ಆರೋಪಿ ಯಾವಾಗಲೂ ನಮ್ಮ ಮನೆಗೆ ಕೆಲಸಕ್ಕೆ ಬರುತ್ತಿದ್ದ ಆದರೆ ನಾವೇ ಸರಿಯಾಗಿ ಸಂಬಳ ಕೊಡುತ್ತಿರಲಿಲ್ಲಎಂದರೆ ಸರಿಯಲ್ಲ. ಆರೋಪಿ ಸಂಬಳ ಕೇಳಿದಾಗ ನಾನು ಸರಿಯಾಗಿ ಸಂಬಳ ಕೊಡದೇ ಬೆದರಿಕೆ ಹಾಕುತ್ತಿದ್ದೆ ಎಂದರೆ ಸರಿಯಲ್ಲ. ನಾನು ಸಂಬಳ ಕೊಡದಿದ್ದ ಕಾರಣ ಆರೋಪಿ ಬೇರೆಯವರ ಮನೆಗೆ ಕೆಲಸಕ್ಕೆ ಹೋಗುತ್ತಿದ್ದ ಎಂದರೆ ಅದಕ್ಕೂ ನನಗೂ ಸಂಬಂಧ ಇಲ್ಲ ಎಂದು ನುಡಿಯುತ್ತಾರೆ.

ಆರೋಪಿ ತನ್ನ ಗದ್ದೆಯಲ್ಲಿ ಜೋಳ ಬೆಳೆಯುತ್ತಾನೆ ಎಂದರೆ ಹೌದು. ಆರೋಪಿ ನಮ್ಮ ಮನೆಗೆ ಕೆಲಸಕ್ಕೆ ಬರುವುದನ್ನು ಬಿಟ್ಟು ತನ್ನ ಜಮೀನಿನಲ್ಲಿ ದುಡಿಮೆ ಮಾಡಲು ಪ್ರಾರಂಭ ಮಾಡಿದಾಗ ನಾನು ಆರೋಪಿಯ ಮೇಲೆ ದ್ವೇಷ ಸಾಧಿಸಲು ಶುರು ಮಾಡಿದೆ ಎಂದರೆ ಸರಿಯಲ್ಲ. ಆರೋಪಿಗೆ

ಸರಿಯಾಗಿ ನಡೆಯಲು ಬರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ ಆದರೆ ಬೈಕಿನಲ್ಲಿ ಬಿದ್ದಿರುತ್ತಾನೆ ಎಂದು ಜನ ಹೇಳಿರುತ್ತಾರೆ.

ನನ್ನ ಜಮೀನಿನ ಉತ್ತರ ದಿಕ್ಕಿಗೆ ನಾಗಪ್ಪನ ಜಮೀನು ಇದೆ ಎಂದರೆ ಹೌದು. ಅದರ ನಂತರ ಆರೋಪಿಯ ಜಮೀನು ಇದೆ ಎಂದರೆ ಹೌದು. ಘಟನೆಯಾದ ಸಮಯದಲ್ಲಿ ನಮ್ಮ ಮತ್ತು ಆರೋಪಿಯ ಜಮೀನಿನಲ್ಲಿ ಜೋಳದ ಬೆಳೆ ಇತ್ತು ಎಂದರೆ ಸರಿಯಲ್ಲ. ಜೋಳವನ್ನು ಕಟಾವು ಮಾಡಿ ಸದರಿ ಜೋಳದ ಬುಡವನ್ನು ತೆಗೆಯಲಾಗಿತ್ತು.

ನಮ್ಮ ಮತ್ತು ಆರೋಪಿಯ ಜಮೀನು ಹಕ್ಕಲು (ಬಯಲು ಪ್ರದೇಶ) ಎಂದರೆ ಹೌದು. ಸದ ಹಕ್ಕಲು ಬಯಲು ಪ್ರದೇಶ ಆಗಿರುವುದರಿಂದ ಯಾರೂ ಬೇಲಿ ಹಾಕುವುದಿಲ್ಲಎಂದರೆ ಹೌದು. ಜಮೀನಿಗೆ ಗಡಿಯಾಗಿ ಹಾಳೆ ಅಥವಾ ಬದು ವಾಗಿ ಮಾಡಿರುತ್ತೇವೆ ಎಂದರೆ ಹೌದು. ಸದರಿ ಬದು ಅವರ ಜಮೀನಿನ ಗಡಿಯಾಗಿರುತ್ತದೆ ಎಂದರೆ ಹೌದು.

ನನ್ನ ಜಮೀನಿನ ಸರ್ವೆ ನಂಬರ್ 6 ಆಗಿರುತ್ತದೆ. ನಮ್ಮ ಜಮೀನಿನ ಪಕ್ಕದಲ್ಲಿ ಇರುವ ನಾಗಪ್ಪನ ಜಮೀನು 60 ರಿಂದ 70 ಅಡಿ ಅಗಲ ಇರುತ್ತದೆ. ಘಟನೆ ಸಮಯದಲ್ಲಿ ನಾನು ಜೋಳದ ಕುಂಡಿಗೆ ಮುರಿದು ಟ್ರಾಕ್ಟರ್ ಗೆ ತುಂಬಿಸುತ್ತಿದ್ದೆ. ಜೋಳದ ಕುಂಡಿಗೆಯನ್ನು ಬುಟ್ಟಿಗೆ ತುಂಬಿ ಟ್ರಾಕ್ಟರ್ ಗೆ ಹಾಕುತ್ತಿದ್ದೆವು. ಜೋಳದ ಕುಂಡಿಗೆಯ ಲೋಡ್ ಸಮತಟ್ಟಾಗಿ ಹಾಕಿದ್ದೆವು ಸೈಡಿನಲ್ಲಿ ಯಾವುದೇ ಕೋಲುಗಳನ್ನು ಹಾಕಿರಲಿಲ್ಲ. ಜೋಳದ ಕುಂಡಿಗೆಯನ್ನು ಹಾಗೆ ಹಾಕಿದರೆ ಕೂರಲು ಬರುವುದಿಲ್ಲ ಚೀಲದಲ್ಲಿ ಹಾಕಿ ಕಟ್ಟಿ ಹಾಕಿದರೆ ಚೀಲದ ಮೇಲೆ ಕೂರಬಹುದು ಎಂದರೆ ಸರಿಯಲ್ಲ. ಘಟನೆ ದಿನ ಪ್ರಾಸಾ 2 ರವರು ಟ್ರಾಕ್ಟರ್ ನ್ನು ಓಡಿಸುತ್ತಿದ್ದರು. ಟ್ರಾಕ್ಟರ್ ಗೆ ನಾನು, ಪ್ರಾ ಸಾ 1 , ಪ್ರಹ್ಲಾದ , ಸೀನ , ತಿಮ್ಮ , ಮಂಜ ರವರು ಜೋಳದ ಲೋಡನ್ನುಮಾಡಿರುತ್ತಾರೆ. ಬೆಳಿಗ್ಗೆ 10 ಗಂಟೆಗೆ ಲೋಡ್ ಮಾಡಲು ಬಂದಿದ್ದು ಬೆಳಿಗ್ಗೆ ಆಗಲಿಲ್ಲ ನಂತರ ಮದ್ಯಾಹ್ನ 3 ಗಂಟೆಗೆ ಟ್ರಾಕ್ಟರ್ ಗೆ ಲೋಡ್ ಮಾಡಿರುತ್ತೇವೆ. ಜೋಳದ ಸಾಲು ಬುಡಕ್ಕೆ ಏರು ಇರುತ್ತದೆ ಎಂದರೆ ಸರಿಯಲ್ಲ.

ಜೋಳದ ಲೋಡ್ ತೆಗೆದುಕೊಂಡು ಗದ್ದೆಯಲ್ಲಿ ಹೋಗುವಾಗ ಟ್ರೇಲರ್ ಆ ಕಡೆ ಈ ಕಡೆ ವಾಲುತ್ತದೆ ಎಂದರೆ ಸರಿಯಲ್ಲ. ಒಂದು ಬದಿಯಿಂದ ಇನ್ನೊಂದು ಬದಿಗೆ ದಾಟುವಾಗ ಹಾಳೆಯ ಮೇಲೆ ದಾಟಬೇಕಾಗುತ್ತದೆ ಎಂದರೆ ಹೌದು. ಒಂದು ಗದ್ದೆಯ ಬದಿಯಿಂದ ಇನ್ನೊಂದು ಗದ್ದೆಯ ಬದಿಗೆ ದಾಟಬೇಕಾದರೆ ಟ್ರಾಕ್ಟರ್ ಆಚೆ ಈಚೆಗೆ ಜೋಲಿ ಹೊಡೆಯುತ್ತದೆ ಎಂದರೆ ಹೌದು.

ಪ್ರಾ ಸಾ 2 ರವರು ಟ್ರಾಕ್ಟರ್ ನ್ನು ಹೊಡೆದುಕೊಂಡು ಬದಿಯನ್ನು ದಾಟುವಾಗ ಹೆಚ್ಚು ಕಡಿಮೆ ಆಗಿ ಟ್ರಾಕ್ಟರ್ ಪಲ್ಟಿ ಹೊಡೆದಿರುತ್ತದೆ ಎಂದರೆ ಸರಿಯಲ್ಲ. ಪಲ್ಟಿ ಹೊಡೆಯುವಾಗ ಬ್ರೇಕ್ ಹಾಕಿದ್ದರಿಂದ ಇಂಜಿನ್ ಪಲ್ಟಿಯಾಗಿ ಪ್ರಾ ಸಾ 2 ರವರಿಗೆ ಪೆಟ್ಟಾಗಿರುತ್ತದೆ ಎಂದರೆ ಸರಿಯಲ್ಲ. ಪಲ್ಟಿ ಹೊಡೆದ ತಕ್ಷಣ ಪ್ರಾ ಸಾ 2 ರವರಿಗೆ ಬ್ಯಾಲೆನ್ಸ್ ತಪ್ಪಿ ಪ್ರಾ ಸಾ2 ಮುಂಬದಿ ಲಾಕ್ ಮೇಲೆ ಬಿದ್ದು ಪ್ರಾ ಸಾ2 ರವರಿಗೆ ಪೆಟ್ಟಾಗಿರುತ್ತದೆ ಎಂದರೆ ಸರಿಯಲ್ಲ.

ನಮ್ಮ ಹಾಗೆ ಬೇರೆಯವರು ಸಹ ಜೋಳ ಬೆಳೆದಿರುತ್ತಾರೆ ಎಂದರೆ ಹೌದು. ಎಲ್ಲರ ಜೋಳವು ಒಂದೇ ಸಮಯದಲ್ಲಿ ಕಟಾವು ಆಗುತ್ತದೆ ಎಂದರೆ ಹೌದು. ಘಟನೆಯ ಸಮಯದಲ್ಲಿ ಅಕ್ಕಪಕ್ಕದ ಜಮೀನಿನವರು ಯಾರೂ ಬರಲಿಲ್ಲ ಎಂದರೆ ನಂತರ ಬಂದಿರುತ್ತಾರೆ ಎಂದು ನುಡಿಯುತ್ತಾರೆ. ಘಟನೆಯಲ್ಲಿ ನಾನು ಜೋರಾಗಿ ಕಿರುಚಿದಾಗ 4 ರಿಂದ 5 ಜನ ಬಂದಿರುತ್ತಾರೆ. ಸದರಿ 4 ರಿಂದ 5 ಜನರ ಹೆಸರು ಗೊತ್ತಿಲ್ಲ ಯಾಕೆಂದರೆ ಆ ಸಮಯದಲ್ಲಿ ನನ್ನ ಮಗನಿಗೆ ಪೆಟ್ಟಾಗಿತ್ತು.

ಪ್ರಾ ಸಾ 2 ರವರಿಗೆ ಟ್ರಾಕ್ಟರ್ ಚಲಾಯಿಸಲು ಡಿ ಎಲ್ ಇಲ್ಲ ಎಂದರೆ ನನಗೆ ಗೊತ್ತಿಲ್ಲ. ಟ್ರಾಕ್ಟರ್ ಓಡಿಸಲು ಹೆಚ್ಚಿನ ತರಭೇತಿ ಅಥವಾ ಅನುಭವ ಬೇಕು ಎಂದರೆ ಹೌದು. ಮಗನಿಗೆ ಪೆಟ್ಟು ಬಿದ್ದ ನಂತರ ನನ್ನ ಮಗನನ್ನು ಕರೆದುಕೊಂಡು ಆಸ್ಪತ್ರೆಗೆ ಹೋಗಿರುತ್ತೇನೆ. ಜಮೀನಿನಲ್ಲಿ ಇದ್ದಂತಹ ಜೋಳ ತುಂಬಿದ ಟ್ರಾಕ್ಟರ್ ಏನಾಯಿತು ಎಂದು ನನಗೆ ಗೊತ್ತಿಲ್ಲ. ನಾನು ಆಸ್ಪತ್ರೆಗೆ ಹೋದಾಗ ಪೋಲೀಸರು ಆಸ್ಪತ್ರೆಗೆ ಬಂದಿದ್ದರ ಎಂದರೆ ಗೊತ್ತಿಲ್ಲ.

ಆನವಟ್ಟಿ ಆಸ್ಪತ್ರೆಯಿಂದ ಶಿಕಾರಿಪುರ ಆಸ್ಪತ್ರೆಗೆ ಹೋಗಿದ್ದು ನಂತರ ಶಿವಮೊಗ್ಗ ಆಸ್ಪತ್ರೆಗೆ ಪ್ರಾ ಸಾ 2 ರವರನ್ನು ಕರೆದುಕೊಂಡು ಹೋದೆವು. ಸದರಿ ಆಸ್ಪತ್ರೆಯಲ್ಲಿ ಆರೋಪಿ ನನ್ನ ಮಗನಿಗೆ ಹೊಡೆದ ಬಗ್ಗೆ ಹೇಳಿಲ್ಲ. ಮ್ಯಾಕ್ಸ್ ಆಸ್ಪತ್ರೆಯಲ್ಲಿ ಪ್ರಾ ಸಾ 2 ರವರನ್ನು ದಾಖಲು ಮಾಡಿ ನಾನು ಅದೇ ದಿನ ರಾತ್ರಿ 9 ರಿಂದ 10 ಗಂಟೆಗೆ ವಾಪಾಸ್ ಬಂದಿರುತ್ತೇನೆ. ಶಿವಮೊಗ್ಗದಿಂದ ನಾನುನಮ್ಮ ಊರಿಗೆ ಬಂದಾಗ ರಾತ್ರಿ 1.30 ರಿಂದ 2.00 ಗಂಟೆ ಆಗಿತ್ತು. ಘಟನೆ ದಿನ ಸಂಜೆ 7 ಗಂಟೆಗೆ ನಾನು ದೂರನ್ನು ಕೊಟ್ಟು ನಂತರ ಶಿಕಾರಿಪುರ ಆಸ್ಪತ್ರೆಗೆ ಹೋಗಿರುತ್ತೇನೆ.ಅಲ್ಲಿಯವರೆಗೂ ಆನವಟ್ಟಿ ಆಸ್ಪತ್ರೆಯಲ್ಲಿ ಇದ್ದೆವು. ಆನವಟ್ಟಿ ಆಸ್ಪತೆಯಲ್ಲಿ 4.00 ರಿಂದ 6.30 ಗಂಟೆ ವರೆಗೂ ಇದ್ದೆವು. ವೈಧ್ಯರು ಬಂದಾಗ 6.30 ಗಂಟೆ ಆಗಿರಬಹುದು. ಶಿವಮೊಗ್ಗ ಆಸ್ಪತ್ರೆಗೆ ಹೋದಾಗ ರಾತ್ರಿ 10.30 ರಿಂದ 11.00 ಗಂಟೆ ಆಗಿತ್ತು .

ದೂರು ನೀಡಿದ ನಂತರ ಪ್ರಾ ಸಾ 2 ರವರನ್ನು ನನ್ನ ಹಿರಿಯ ಮಗ ಶಿಕಾರಿಪುರ ಆಸ್ಪತ್ರೆಗೆ ಆ್ಯಂಬುಲೆನ್ಸ್ ನಲ್ಲಿ ಕರೆದುಕೊಂಡು ಹೋಗಿರುತ್ತಾರೆ. ನಾನು ಮತ್ತು ಮಹೇಂದ್ರ ನಮ್ಮ ಓಮಿನಿಯಲ್ಲಿ ಹೋಗಿರುತ್ತೇವೆ. ಆನವಟ್ಟಿಯನ್ನು ನಾವು ಸಂಜೆ 6.30 ಗಂಟೆಗೆ ಬಿಟ್ಟಿರಬಹುದು.

ಆನವಟ್ಟಿ ಆಸ್ಪತೆಯಲ್ಲಿ 4.00 ರಿಂದ 6.30 ಗಂಟೆ ವರೆಗೂ ಇದ್ದ ಸಮಯದಲ್ಲಿ ಪೋಲೀಸರು ಹೇಳಿಕೆ ಪಡೆದ ಬಗ್ಗೆ ನನಗೆ ನೆನಪಿಲ್ಲ. ದೂರನ್ನು ಕೊಡಲು ನಾನು ಮತ್ತು ನನ್ನ ಹಿರಿಯ ಮಗ ಆನವಟ್ಟಿ ಪೋಲೀಸ್ ಠಾಣೆಗೆ ಸಂಜೆ 6.30 ರಿಂದ 7.00 ಗಂಟೆ ಸಮಯದಲಕ್ಕಿ ಹೋಗಿದ್ದೆವು. ದೂರನ್ನು ಠಾಣೆಯಲ್ಲಿ ಯಾರು ಬರೆದರು ಎಂದು ನನಗೆ ಗೊತ್ತಿಲ್ಲ. ದೂರಿನಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ ಎಂದರೆ ನಾನು ನೋಡಲಿಲ್ಲ ಎಂದು ನುಡಿಯುತ್ತಾರೆ.

ಮಾರನೇ ದಿನ ಪೋಲೀಸರು ಮದ್ಯಾಹ್ನ 3.00 ಗಂಟೆಗೆ ಸ್ಥಳಕ್ಕೆ ಬಂದಿರುತ್ತಾರೆ. ಆ ಸಮಯದಲ್ಲಿ ನಮ್ಮ ಊರಿನವರು 4 ರಿಂದ 5 ಜನ ಇದ್ದರು. ಪೋಲೀಸರು ಘಟನಾ ಸ್ಥಳಕ್ಕೆ ಬಂದ ಸಮಯದಲ್ಲಿ ಲೋಡ್ ಮಾಡಿದ ಟ್ರಾಕ್ಟರ್ ಇರಲಿಲ್ಲ. ಪೋಲೀಸರು ಟ್ರಾಕ್ಟರ್ ಬಗ್ಗೆ ನನ್ನನ್ನು ಕೇಳಿಲ್ಲ. ಪ್ರಾ ಸಾ 2 ರವರ ಡಿ ಎಲ್ ನ್ನು ಪೋಲೀಸರು ನನ್ನ ಹತ್ತಿರ ಕೇಳಿಲ್ಲ. ಟ್ರಾಕ್ಟರ್ ನನ್ನ ಹೆಸರಿಗೆ ಇದೆ.

ಪೋಲೀಸರು ಬಂದ ಸಮಯದಲ್ಲಿ ಟ್ರಾಕ್ಟರ್ ಸ್ಥಳದಲ್ಲಿಇದ್ದರೆ ವಿಷಯ ಗೊತ್ತಾಗುತ್ತದೆ ಎಂದು ಟ್ರಾಕ್ಟರ್ ನ್ನು ಬೇರೆ ಕಡೆಗೆ ಸಾಗಿಸಿದ್ದೇವೆ ಎಂದರೆ ಸರಿಯಲ್ಲ. ಪ್ರಾ ಸಾ 2 ರವರಿಗೆ ಡಿ ಎಲ್ ಇರಲಿಲ್ಲ , ರಾತ್ರೋ ರಾತ್ರಿ ಟ್ರಾಕ್ಟರ್ ಖಾಲಿ ಮಾಡಿಸಿ ಬೇರೆ ಕಡೆಗೆ ತೆಗೆದುಕೊಂಡು ಹೋಗಿದ್ದೇವೆ ಎಂದರೆ ಸರಿಯಲ್ಲ. ಈ ಹಿಂದೆ ನನ್ನ ಮಗ ಟ್ರಾಕ್ಟರ್ ಓಡಿಸುವಾಗ ಒಂದು ಸಾರಿ ಬಿದ್ದು ಪೆಟ್ಟು ಮಾಡಿಕೊಂಡಿರುತ್ತಾನೆ ಎಂದರೆ ಸರಿಯಲ್ಲ. ಘಟನಾ ಸ್ಥಳವನ್ನು ಪೋಲೀಸರಿಗೆ ರವೀಂದ್ರ ತೋರಿಸಿರುತ್ತಾನೆ. ನಿಪಿ 3 ಫೋಟೋದಲ್ಲಿ ಕಾಣುವ ಜೋಳವು ಮುರಿದಿಲ್ಲ ಎಂದರೆ ನಾನು ನಿಂತ ಜಾಗದಲ್ಲಿ ಮಾತ್ರ ಜೋಳ ಮುರಿದಿದ್ದು ಕಂಡುಬರುತ್ತದೆ ಎಂದರೆ ಹೌದು. ಮು ಮಾ1 ನ್ನು ಆರೋಪಿ ತಂದಿದ್ದು ಅದು ಎಲ್ಲಿಂದ ತಂದ ಎಂದು ನಾನು ಗಮನಿಸಿಲ್ಲ. ಮು ಮಾ 1 ಕ್ಕೆ ನಾನು ನಿಖರವಾದ ಗುರುತು ಇಟ್ಟುಕೊಂಡಿಲ್ಲ. ಪ್ರಾ ಸಾ2 ರವರಿಗೆ ಮು ಮಾ1 ರಿಂದ ಹೊಡೆದಂತಹ ಗೂಟ ಅಲ್ಲ. ಮು ಮಾ 1 ನ್ನು ಪೋಲೀಸರಿಗೆ ಯಾರು ಕೊಟ್ಟರು ಎಂದು ನನಗೆ ಗೊತ್ತಿಲ್ಲ. ಪೋಲೀಸರು ನನ್ನ ಎದುರುಗಡೆ ಮು ಮಾ1 ನ್ನು ತೆಗೆದುಕೊಂಡು ಹೋಗಿಲ್ಲ. ಟ್ರಾಕ್ಟರ್ ಮೇಲೆ ನಾನು, ನನ್ನ ಹಿರಿಯ ಮಗ ಪ್ರಹ್ಲಾದ ಕೂತಿದ್ದೆವು. ಟ್ರಾಕ್ಟರ್ ನ ಪಕ್ಕದಲ್ಲಿ ಇರುವ ಸೀಟುಗಳಲ್ಲಿ ಜನ ಕೂರುತ್ತಾರೆ ಎಂದರೆ ಸರಿಯಲ್ಲ ಆದರೆ ಕೆಲವರು ಕೂರುತ್ತಾರೆ ಕೆಲವರು ಕೂರುವುದಿಲ್ಲ.

ನಾನು ಆ ಸಮಯದಲ್ಲಿ ಟ್ರಾಲಿ ಮೇಲೆ ಕೂತಿದ್ದೆ. ಆರೋಪಿ ಬರುವುದನ್ನು ನಾನು 60 ರಿಂದ 70 ಅಡಿ ದೂರದಿಂದ ನೋಡಿರುತ್ತೇನೆ. ಆರೋಪಿ ಮು ಮಾ 1 ನ್ನು 60 ರಿಂದ 70 ಅಡಿದೂರದಿಂದ ಬೈದುಕೊಂಡು ಬಂದಿರುತ್ತಾನೆ.

(ಆರೋಪಿ ಪರ ವಕೀಲರು ಮುಂದುವರೆದ ಪಾಟೀಸವಾಲಿಗೆ ಸಮಯ ಕೋರಿದ್ದು ಸಮಯ ನೀಡಿ ಮುಂದೂಡಲಾಯಿತು)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯ ಪ್ರಕಾರ ನನ್ನ ಉಕ್ತಲೇಖನದ ರೀತ್ಯಾ ಗಣಕೀಕರಣಗೊಳಿಸಲಾಯಿತು)

ಓ ಹೇ ಕೇ ಸ ಇದೆ

5 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಶಿವಮೊಗ್ಗ (ಪೀಠಾಸೀನ, ಸಾಗರ).